ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಜೆಎಂಎಫ್‌ಸಿ ನ್ಯಾಯಾಲಯ, ಕೆಜಿಎಫ್

ಸಿ.ಸಿ.ನಂ.3584/2025

ಚಾಸಾ: 1 ಫ್ರಾಸಾ:1

ದಿನಾಂಕಃ 02.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಸಾಕ್ಷಿದಾರರ ಹೆಸರು– ಮನೋಜ್ ಕುಮಾರ್

ತಂದೆಯ ಹೆಸರು– ಬಾಲು

ವಯಸ್ಸು – 27 ವರ್ಷ

ಉದ್ಯೋಗ– ಕೂಲಿ ಕೆಲಸ

ವಾಸ– ಕೆಜಿಎಫ್

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

**1.** ಚಾಸಾ–**2** ರಿಂದ **4** ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿತರು ನನಗೆ ಗೊತ್ತಿಲ್ಲ. ಆರೋಪಿತರು ಸಮಾನ ಉದ್ದೇಶದಿಂದ ಯಾವುದೇ ವಸ್ತುವಿನಿಂದ ಹಲ್ಲೆ ಮಾಡಿರುವುದಿಲ್ಲ. ನಾನು ಪೋಲೀಸರಿಗೆ ಯಾವುದೇ ದೂರು ನೀಡಿರುವುದಿಲ್ಲ. ಸದರಿ ದೂರು ನಿಪಿ–**1** ಎಂದು ಮತ್ತು ಸಾಕ್ಷಿ ಸಹಿ ನಿಪಿ–**1**(ಎ) ಎಂದು ಗುರುತಿಸಲಾಯಿತು. ನಿಪಿ–**1** ರಲ್ಲಿ ಬರೆದಿರುವ ವಿಷಯಗಳ ಬಗ್ಗೆ ನನಗೆ ಏನು ಗೊತ್ತಿಲ್ಲ. ಯಾವ ವಿಷಯಕ್ಕೆ ಸಂಬಂಧಿಸಿದಂತೆ ನನ್ನ ಸಹಿ ಪಡೆದುಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದೆ ಇರುವ ಚಾಕುವನ್ನು ನಾನು ಈ ಹಿಂದೆ ನೋಡಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಪ್ರತಿಕೂಲ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃಮಾನ್ಯ ಎಪಿಪಿ ರವರಿಂದಃ**

2. ದಿನಾಂಕ 12.11.2025 ರಂದು ರಾತ್ರಿ 9.45 ಗಂಟೆ ಸಮಯದಲ್ಲಿ ನಾನು ಹಾಲ್ ನ್ನು ತೆಗೆದುಕೊಳ್ಳಲು ನಿಂತಿರುವಾಗ ಆರೋಪಿತರು ನನ್ನ ಬಳಿ ಬಂದು 2 ನೇ ಆರೋಪಿ ನನ್ನನ್ನು ಕುರಿತು ರೂ.100/– ಕೊಡು ಮಧ್ಯಪಾನ ಮಾಡಬೇಕು ಎಂದು ಕೇಳಿದಾಗ ನಾನು ನನ್ನ ಬಳಿ ಹಣ ಇರುವುದಿಲ್ಲ ಎಂದು ಹೇಳುತ್ತಿದ್ದಂತೆಯೇ 1 ನೇ ಆರೋಪಿಯು ಒಂದು ಚಾಕುವನ್ನು ತೆಗೆದುಕೊಂಡು ಹಣ ಕೊಡಲು ಕೇಳಿದರೆ ಕೊಡುವುದಿಲ್ಲ ಎಂದು ಹೇಳಿ ಏಕಾಏಕಿ ನನ್ನ ತಲೆಯ ಮೇಲೆ ಚಾಕುವಿನಿಂದ ಹೊಡೆದು ರಕ್ತಗಾಯ ಪಡಿಸಿರುತ್ತಾರೆ ಎಂದರೆ ಸುಳ್ಳು. ಅದೇ ರೀತಿ 2 ನೇ ಆರೋಪಿ ಕೈಗಳಿಂದ ನನ್ನ ಬಾಯಿ ಮತ್ತು ಮುಖದ ಮೇಲೆ ಹೊಡೆದು ಗಾಯಪಡಿಸಿರುತ್ತಾನೆ ಎಂದರೆ ಸುಳ್ಳು. ಅದೇ ರೀತಿ 3 ನೇ ಆರೋಪಿ ನನ್ನ ಬೆನ್ನಿನ ಮೇಲೆ ಹೊಡೆದು ನೋವುಂಟು ಮಾಡಿರುತ್ತಾರೆ ಎಂದರೆ ಸುಳ್ಳು. ಆ ಸಮಯದಲ್ಲಿ ಚಾಸಾ–2 ರವರು ಜಗಳವನ್ನು ಬಿಡಿಸಿರುತ್ತಾರೆ

ಎಂದರೆ ಸುಳ್ಳು. ನಾನು ಈಗ ಆರೋಪಿಯೊಂದಿಗೆ ರಾಜಿ ಮಾಡಿಕೊಂಡಿರುತ್ತೇನೆ ಎಂದರೆ ಸರಿ. ಆದ ಕಾರಣ ನ್ಯಾಯಾಲಯದಲ್ಲಿ ಆರೋಪಿರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ವಕೀಲರು ಇರುವುದಿಲ್ಲ ಎಂದು ತಿಳಿಸಿರುತ್ತಾರೆ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಜಯಲಕ್ಷ್ಮೀ ಎನ್.ಬಿ)
ಹಿರಿಯ ಸಿ.ಜೆ. ಮತ್ತು ಪ್ರಧಾನ ಜೆಎಂಎಫ್‌ಸಿ
ಕೆಜಿಎಫ್